# ಶ್ರೀ ವಿನಾಯಕ ದೇವಾಲಯ ಇಡಗುಂಜಿ

(ಸುಪ್ರೀಂ ಕೋರ್ಟ್ ರಿಸೀವರ್ ಜಿಲ್ಲಾ ನ್ಯಾಯಾಧೀಶರ ಆಡಳಿತದಲ್ಲಿದೆ.)

ದಿನಾಂಕ:-05/06/2025

**ಅಂಗಡಿ ಮಳಿಗೆಗಳ ಬಹಿರಂಗ ಹರಾಜು ಪ್ರಕಟಣೆ**

ಗೌರವಾನ್ವಿತ ರಿಸೀವರ್, ಶ್ರೀ ವಿನಾಯಕ ದೇವಾಲಯ ಇಡಗುಂಜಿ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಕಾರವಾರ ಇವರ ಆದೇಶದ ಮೇರೆಗೆ ಶ್ರೀ ವಿನಾಯಕ ದೇವಾಲಯ ಇಡಗುಂಜಿಗೆ ಸಂಬಂಧಿಸಿದ ಈ ಕೆಳಕಂಡ 8 ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜು ಪ್ರಕ್ರಿಯೆಯ ಮೂಲಕ ನೀಡಲು ತೀರ್ಮಾನಿಸಲಾಗಿದೆ. ಈ ಸಂಬಂಧ **ದಿನಾಂಕ 20/06/2025ರಂದು ಬೆಳಿಗ್ಗೆ 11 ಗಂಟೆಗೆ ದೇವಾಲಯದ ಮಂಗಲಮೂರ್ತಿ ಮಂಗಲ ಕಾರ್ಯಾಲಯದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ** ನಡೆಸಲಾಗುವುದು,

**ಹರಾಜು ಕರೆಯಲ್ಪಡುವ ಅಂಗಡಿ ಮಳಿಗೆಗಳ ವಿವರ:**

| ಅ.ನಂ | ಅಂಗಡಿ ಮಳಿಗೆ ಇರುವ ಸ್ಥಳ | ಅಂಗಡಿ ಮಳಿಗೆ ನಂಬರು |
|---|---|---|
| 1 | ಕಪಿಲ ಕಟ್ಟಡದ ನೆಲಮಹಡಿ | 1 (390/1) |
| 2 | ಕಪಿಲ ಕಟ್ಟಡದ ನೆಲಮಹಡಿ | 2 (390/2) |
| 3 | ಕಪಿಲ ಕಟ್ಟಡದ ನೆಲಮಹಡಿ | 3 (390/3) |
| 4 | ಕಪಿಲ ಕಟ್ಟಡದ ನೆಲಮಹಡಿ | 4 (390/4) |
| 5 | ಕಪಿಲ ಕಟ್ಟಡದ ನೆಲಮಹಡಿ | 5 (390/5) |
| 6 | ಕಪಿಲ ಕಟ್ಟಡದ ನೆಲಮಹಡಿ | 6 (390/6) |
| 7 | ಕಪಿಲ ಕಟ್ಟಡದ ನೆಲಮಹಡಿ | 7 (390/7) |
| 8 | ಕಪಿಲ ಕಟ್ಟಡದ ಪಕ್ಕ - | 12 (416) |

**ಸೂಚನೆಗಳು**

1. ಪ್ರತಿ ಅಂಗಡಿ ಮಳಿಗೆಗೆ ತಿಂಗಳಿಗೆ ರೂಪಾಯಿ 3500.00 (ಮೂರು ಸಾವಿರದ ಐದು ನೂರು ಮಾತ್ರ) ಮೂಲ ಬಾಡಿಗೆ ನಿಗದಿಪಡಿಸಲಾಗಿದ್ದು, ಬಹಿರಂಗ ಹರಾಜಿನಲ್ಲಿ ಭಾಗವಹಿಸಿದ, ಅತೀ ಹೆಚ್ಚಿನ ತಿಂಗಳ ಬಾಡಿಗೆ ಕೂಗುವ, ಈ ಕೆಳಗಿನ ಷರತ್ತಿಗೆ ಒಪ್ಪಿರುವವರಿಗೆ ಮಾತ್ರ 11 ತಿಂಗಳ ಬಾಡಿಗೆನಾತೆಯ ಲೈಸೆನ್ಸ್ ಕರಾರಿನೊಂದಿಗೆ ಅಂಗಡಿ ಮಳಿಗೆಯನ್ನು ನೀಡಲಾಗುವುದು.

-----2

SCAN AnyScanner

2. ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಅಂಗಡಿ ಮಳಿಗೆಯನ್ನು ಪರಿಶೀಲನೆ ಮಾಡಬಹುದು.
3. ಹೆಚ್ಚಿನ ಮಾಹಿತಿಗಾಗಿ ಶ್ರೀ ವಿನಾಯಕ ದೇವಾಲಯ ಇಡಗುಂಜಿಯ ಕಾರ್ಯಾಲಯವನ್ನು ಸಂಪರ್ಕಿಸಬಹುದು, **ಕಾರ್ಯಾಲಯದ ದೂರವಾಣಿ ಸಂಖ್ಯೆ-08387 247227.**
4. ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.
5. ತಿಂಗಳ ಲೈಸೆನ್ಸ್ ಕರಾರು ಪತ್ರದಲ್ಲಿ ಮಣಿಗಾರರು, ಶ್ರೀ ವಿನಾಯಕ ದೇವರು, ಇಡಗುಂಜಿ ಇವರು ಲೈಸನ್ಸರ್ ಆಗಿದ್ದು, ಅಂಗಡಿ ಮಳಿಗೆಯನ್ನು ಬಾಡಿಗೆಗೆ ಪಡೆಯುವವರು ಲೈಸನ್ಸಿಯಾಗಿರುತ್ತಾರೆ
6. ಕಾಲಕಾಲಕ್ಕೆ ಗೌರವಾನ್ವಿತ ರಿಸೀವರ್, ಶ್ರೀ ವಿನಾಯಕ ದೇವಾಲಯ ಇಡಗುಂಜಿ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಕಾರವಾರ ಇವರ ನಿರ್ದೇಶನದ ಮೇರೆಗೆ ಮಣಿಗಾರರು, ಶ್ರೀ ವಿನಾಯಕ ದೇವಾಲಯ ಇಡಗುಂಜಿ ಇವರು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು.
7. ಅಂಗಡಿ ಮಳಿಗೆಯನ್ನು ಬಹಿರಂಗ ಹರಾಜಿನಲ್ಲಿ ಪಡೆದವರು ಭದ್ರತಾ ಠೇವಣಿಯಾಗಿ ಬಹಿರಂಗ ಹರಾಜಿನಲ್ಲಿ ತಾವು ಕೂಗಿದ ತಿಂಗಳ ಬಾಡಿಗೆಯ ಹತ್ತು ಪಟ್ಟು/ ಹತ್ತು ತಿಂಗಳ ಬಾಡಿಗೆಯಷ್ಟು ಮೊತ್ತವನ್ನು ಕರಾರು ಪತ್ರ ಮಾಡುವ ಪೂರ್ವದಲ್ಲಿ ದೇವಾಲಯದ ಕಾರ್ಯಾಲಯದಲ್ಲಿ ಪಾವತಿಸಿ ರಶೀದಿ ಪಡೆಯತಕ್ಕದ್ದು.

**ಶರ್ತಗಳು:-**

1) ಕರಾರಿನ ಅವಧಿಯು ಮುಗಿದ ಕೂಡಲೇ ಲೈಸನ್ಸಿಯು ಸದ್ರಿ ಇಮಾರತಿನ ಖುಲ್ಲಾ ಕಬಜಾ ಬಿಟ್ಟು ಕೊಡತಕ್ಕದ್ದು. ಲೈಸನ್ಸನಾತೆಯು ಮುಕ್ತಾಯವಾದ ನಂತರ ಯಾವುದೇ ಕಾರಣಕ್ಕೂ ಸದ್ರಿ ಇಮಾರತಿನಲ್ಲಿರಲು ಲೈಸನ್ಸಿಗೆ ಬರಲಾರದು. ಆ ಕೂಡಲೇ ಲೈಸನ್ಸರ್ ಲೈಸನ್ಸಿಯ ತಕರಾರು ಲೆಕ್ಕಿಸದೆ ಪ್ರತ್ಯಕ್ಷ ಕಬಜಾ ಪಡೆಯಲು ಹಕ್ಕುದಾರರಿರುತ್ತಾರೆ. ಮತ್ತು ಹೀಗೆ ಕಬಜಾ ಪಡೆಯುವ ಸಂದರ್ಭದಲ್ಲಿ ಲೈಸನ್ಸಿಗೆ ಲೈಸನ್ಸರನು ನೋಟಿಸನ್ನು ಕೊಡುವ ಅವಶ್ಯಕತೆ ಇರುವುದಿಲ್ಲ.
2) ಗೌರವಾನ್ವಿತ ರಿಸೀವರ್, ಶ್ರೀ ವಿನಾಯಕ ದೇವಾಲಯ ಇಡಗುಂಜಿ ಇವರ ನಿರ್ದೇಶನದ ಮೇರೆಗೆ ಲೈಸನ್ಸರ್ ನಿರ್ಧರಿಸಿದ್ದಲ್ಲಿ ಮಾತ್ರ ಲೈಸನ್ಸರ್ ನಿರ್ಧರಿಸುವ ಮುಂದಿನ ಅವಧಿಗೆ ತಾತ್ಪೂರ್ತಿಕವಾಗಿ ಲೈಸನ್ಸನಾತೆಯನ್ನು ಗರಿಷ್ಠ ಎರಡು ಬಾರಿ ನವೀಕರಿಸಿ ಮುಂದುವರೆಸಬಹುದು ಮತ್ತು ಈ ಬಗ್ಗೆ ಹೊಸ ಕರಾರು ಮಾಡಿಕೊಡತಕ್ಕದ್ದು.
3) ಆಯಾ ತಿಂಗಳ ಲೈಸನ್ಸ ಫೀ(ಬಾಡಿಗೆ)ಯನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗೆ ಲೈಸನ್ಸಿಯು ಚುಕ್ತಾ ಸಂದಾಯ ಮಾಡತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ಬಾಕೀ ಲೈಸನ್ಸ್ ಫೀ (ಬಾಡಿಗೆ) ಮೇಲೆ 18% ರಂತೆ ಬಡ್ಡಿ ಆಕರಿಸಲಾಗುವುದು.
4) ಲೈಸನ್ಸಿಯು ಸತತವಾಗಿ ಮೂರು ತಿಂಗಳು ಲೈಸನ್ಸ್ ಫೀ(ಬಾಡಿಗೆ) ಸಂದಾಯ ಮಾಡದೇ ಬಾಕಿ ಇಟ್ಟುಕೊಂಡಲ್ಲಿ ಈ ಲೈಸನ್ಸ್‌ನಾತೆಯು ರದ್ದಾಗಿರುತ್ತದೆಂತ ಪರಿಗಣಿಸತಕ್ಕದ್ದು ಮತ್ತು ಲೈಸನ್ಸಿಯನ್ನು ಹೊರಹಾಕುವರೇ ಆಸ್ತಿಯ ಕಬಜಾ ಮಾಡುವರೇ ಲೈಸನ್ಸರ್‌ರಿಗೆ ಅಧಿಕಾರವಿರುತ್ತದೆ.

-----3

SCAN AnyScanner

5) ಲೈಸನ್ಸಿಯು ಭದ್ರತಾ ಠೇವಣಿಯಾಗಿ ಬಹಿರಂಗ ಹರಾಜಿನಲ್ಲಿ ನಿಗದಿಪಡಿಸಲಾದ ತಿಂಗಳ ಬಾಡಿಗೆಯ ಹತ್ತು ಪಟ್ಟು/ ಹತ್ತು ತಿಂಗಳ ಬಾಡಿಗೆಯಷ್ಟು ಮೊತ್ತವನ್ನು ಪಾವತಿಸುವುದು. ಸದ್ರಿ ಠೇವಣಿಗೆ ಯಾವುದೇ ಬಡ್ಡಿ ಆಕರಿಸತಕ್ಕದ್ದಿಲ್ಲಾ. ಕರಾರಿಗೊಪ್ಪಿದ ಲೈಸನ್ಸನಾತೆಯು ಮುಕ್ತಾಯವಾಗಿ ಖಲ್ಲಾ ಕಬಜಾ ನೀಡಿದ ಕೂಡಲೇ ಲೈಸನ್ಸ್‌ರ್‌ರು ಸದ್ರಿ ರಖಂನ್ನು ನಿಬ್ಬಡ್ಡಿಯಿಂದ ಲೈಸನ್ಸಿಗೆ ವಾಪಾಸ್ ಮಾಡುವುದು. ಮತ್ತು ಈ ಸಂದರ್ಭದಲ್ಲಿ ಲೈಸನ್ಸ್ ಫೀ(ಬಾಡಿಗೆ), ವಿದ್ಯುತ್ ಶುಲ್ಕ, ನಷ್ಟಪರಿಹಾರ ಇತ್ಯಾದಿ ಯಾವುದೇ ಕಾಯಿದೆಬದ್ಧ ವಸೂಲಾತ್ಮಕ ಹಣವನ್ನು ವಜಾಮಾಡಿಕೊಳ್ಳಲು ಲೈಸನ್ಸರ್‌ಗೆ ಅಧಿಕಾರವಿರುತ್ತದೆ.

6) ಲೈಸನ್ಸಿಯು ಕರಾರಿಗೊಪ್ಪಿದ ಕೋಣೆಯನ್ನು ಕೇವಲ ಹಣ್ಣು-ಕಾಯಿ, ಪೂಜಾ ಸಾಮಾಗ್ರಿಗಳ, ಸ್ಟೇಶನರಿ, ಚಿಲ್ಲರೆ ವ್ಯಾಪಾರ ಮಾಡುವ ಬಗ್ಗೆ ಮಾತ್ರ ಉಪಯೋಗಿಸತಕ್ಕದ್ದು. ಸದ್ರಿ ಉದ್ದೇಶದ ಹೊರತಾಗಿ ಬೇರೆ ಯಾವುದೇ ಉದ್ದೇಶದ ಬಗ್ಗೆ ಉಪಯೋಗಿಸಲು ಬೇಕಾಯಿದೇಶೀರ್ ವ್ಯವಹಾರ ನಡೆಸಲು, ಕಾಯಿದೆ ಬಾಹಿರ ಹಾಗೂ ಹಾನಿಕಾರಕ ಸಾಮಾಗ್ರಿ ಇಡಲು ಯಾ ದಾಸ್ತಾನು ಮಾಡಲು "ಲೈಸನ್ಸಿಗೆ" ಬರಲಾರದು ಮತ್ತು ದೇವಸ್ಥಾನದಲ್ಲಿರತಕ್ಕ ಪವಿತ್ರ ವಾತಾವರಣವನ್ನು ಯಾವಾಗಲೂ ಕಾಯ್ದುಕೊಂಡು ಬರತಕ್ಕದ್ದು ಮತ್ತು ಯಾವುದೇ ರೀತಿ ತೊಂದರೆ ಆತಂಕ ಮಾಡತಕ್ಕದ್ದಲ್ಲ.

7) ಕರಾರಿಗೊಪ್ಪಿದ ಕೋಣೆಯ ಯಾ ಕಟ್ಟಡಕ್ಕೆ ಯಾವುದೇ ಬದಲಾವಣೆ ಮಾಡಲು ವಡಾಯಿಸಲು ಶಾಶ್ವತ ಮಾರ್ಪಾಟು ಮಾಡಲು ಲೈಸನ್ಸಿಗೆ ಬರಲಾರದು.

8) ಕರಾರಿಗೊಪ್ಪಿದ ಕೋಣೆಯನ್ನು ಪರಾಧೀನತೆ ಮಾಡಲು ಪೋಟ್ ಬಾಡಿಗೆಗೆ ಪೋಟ್ ಲೈಸನ್ಸಿಗೆ ನೀಡಲು "ಲೈಸನ್ಸಿ"ಗೆ ಬರಲಾರದು. ಮತ್ತು ಈ ಲೈಸೆನ್ಸ್ ನಾತೆಯು ಈ ಲೈಸೆನ್ಸಿಗೆ ವೈಯಕ್ತಿಕವಾಗಿ ನೀಡಿದ್ದಿದ್ದು ಆತನ ಸಂತತಿ ಉತ್ತರಾಧಿಕಾರಿಗಳಿಗೆ ಲೈಸನ್ಸಿನಾತೆಯಲ್ಲಿ ಅಧಿಕಾರ ಇರುವುದಿಲ್ಲ. ಬೇರೆ ಯಾರಿಗೂ ಸದ್ರಿ ಕೋಣೆಯನ್ನು ಉಪಯೋಗಿಸಲು ಲೈಸನ್ಸಿಯು ಅವಕಾಶ ಕೊಡತಕ್ಕದ್ದಲ್ಲ.

9) ಲೈಸನ್ಸಿಯು ಕರಾರಿಗೊಪ್ಪಿದ ಕೋಣೆಯನ್ನು ಕಾಳಜಿಯಂತೆ ಉಪಯೋಗಿಸತಕ್ಕದ್ದು ಹಾಗೂ ಶುಚಿಯಾಗಿಡತಕ್ಕದ್ದು. ಕಟ್ಟಡಕ್ಕೆ ಯಾವುದೇ ಹಾನಿಯುಂಟು ಮಾಡತಕ್ಕದ್ದಲ್ಲ. ತನ್ನ ವರ್ತನೆಯಿಂದ ಯಾ ಕ್ರಮದಿಂದ ಅಕ್ಕಪಕ್ಕದವರಿಗೆ ಲೈಸನ್ಸರಿಗೆ, ಶ್ರೀ ದೇವರ ಭಜಕರಿಗೆ, ಸಾರ್ವಜನಿಕರಿಗೆ ಯಾವುದೇ ರೀತಿಯ ಕಿರುಕುಳ ಇತ್ಯಾದಿ ಉಂಟುಮಾಡತಕ್ಕದ್ದಲ್ಲ.

10) ಸದ್ರಿ ಕೋಣೆಯು ಮಾತ್ರ ಲೈಸನ್ಸಿಗೊಪ್ಪಿದ್ದು, ಕೋಣೆಯ ಕಟ್ಟಡದ ಮುಂದಿನ ಸ್ಥಳದಲ್ಲಿ ಯಾವುದೇ ಸಾಮಾನಿಡುವುದು, ದಾಸ್ತಾನಿಡುವುದು ಮುಂತಾದ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ ಮತ್ತು ಖಲ್ಲಾ ಇಡತಕ್ಕದ್ದು.

---4

AnyScanner

11) ಕರಾರಿಗೊಪ್ಪಿದ ಕೋಣೆಯ ಬಗ್ಗೆ “ಲೈಸನ್ಸಿ”ಯು ಉಪಯೋಗಿಸುವ ವಿದ್ಯುತ್ ಖರ್ಚನ್ನು ಲೈಸನ್ಸಿಯು ನಿಯಮಿತವಾಗಿ ಸಂದಾಯ ಮಾಡತಕ್ಕದ್ದು.

12) ಒಂದಾನುವೇಳೆ ಪಂಚಾಯತ್ ಕರವು ಅನಿರೀಕ್ಷಿತವಾಗಿ ಏರಿಕೆಯಾದಲ್ಲಿ ಏರಿಕೆಯಾದ ಕರದ ಹಣದಷ್ಟು ಹೆಚ್ಚಿನ ಲೈಸೆನ್ಸ್ ಫೀ(ಬಾಡಿಗೆ) ಲೈಸೆನ್ಸರ್‌ರಿಗೆ ಸಂದಾಯ ಮಾಡಲು ಲೈಸನ್ಸಿಯು ಬದ್ಧನಿರುತ್ತಾನೆ. ಪಂಚಾಯತ ಕರ, ತೆರಿಗೆಗಳನ್ನು ಲೈಸೆನ್ಸರ್‌ರೇ ಭರಿಸತಕ್ಕದ್ದು.

13) ಇಮಾರತಿನ ದುರಸ್ತಿ ನಿರ್ವಹಣೆ ಇತ್ಯಾದಿ ಬಗ್ಗೆ ಅವಶ್ಯವಿದ್ದಲ್ಲಿ ಲೈಸನ್ಸ್‌ರಿಗೆ ಯಾ ಅವರ ಜನರಿಗೆ ಇಮಾರತಿನೊಳಗೆ ಹೋಗಲು, ದುರಸ್ತಿ, ನಿರ್ವಹಣೆ ಮಾಡಲು ಲೈಸನ್ಸಿಯು ಅವಕಾಶ ನೀಡತಕ್ಕದ್ದು. ಮತ್ತು ಯಾವುದೇ ರೀತಿಯಿಂದ ನಿರ್ಬಂದಿಸತಕ್ಕದ್ದಲ್ಲ ಹಾಗೂ ಯಾವತ್ತೂ ಸಹಕಾರ ನೀಡತಕ್ಕದ್ದು.

14) ಲೈಸನ್ಸರ್ ತಮ್ಮ ಇಚ್ಛೆಯಂತೆ ಇಮಾರತನ್ನು ವಡಾಯಿಸುವಲ್ಲಿ, ಮಾರ್ಪಾಡು ಮಾಡುವಲ್ಲಿ ಲೈಸನ್ಸಿಯು ಯಾವುದೇ ಅಡ್ಡಿ ಆತಂಕ ಮಾಡತಕ್ಕದ್ದಲ್ಲ.

15) ಉಭಯ ಪಾರ್ಟಿಗಳಲ್ಲಿ ಯಾರಿಗಾದರೂ ಈ ಲೈಸನ್ಸಿನಾತೆಯನ್ನು ಅವಧಿಗೆ ಮುಂಚಿತವಾಗಿಯೇ ಅಂತ್ಯ ಪಡಿಸಿಕೊಳ್ಳುವುದಿದ್ದಲ್ಲಿ ಒಂದು ತಿಂಗಳ ಮುಂಚಿತ ನೋಟೀಸನ್ನು ನೀಡುವುದು.

16) ಲೈಸನ್ಸಿಯು ಅಂಗಡಿಯ ಮುಂದೆ ಜನದಟ್ಟಣೆಯಾಗದಂತೆ ನೋಡಿಕೊಳ್ಳುವುದು.

17) ”ಲೈಸನ್ಸಿ”ಯು ಮೇಲ್ಕಾಣಿಸಿದ ಯಾವುದೇ ಶರ್ತಗಳನ್ನು ಉಲ್ಲಂಘಿಸಿದಲ್ಲಿ ಈ ಲೈಸನ್ಸಿನಾತೆಯು ರದ್ದಾಗಿರುತ್ತದೆಂತಾ ಪರಿಗಣಿಸಿ ಕೂಡಲೇ “ಲೈಸನ್ಸಿ”ಯನ್ನು ಸದ್ರಿ ಕಟ್ಟಡದ ಕೋಣೆಯಿಂದ ಖುಲ್ಲಾ ಪಡಿಸಲು ಲೈಸನ್ಸ್‌ರಿಗೆ ಅಧಿಕಾರವಿರುತ್ತದೆ.

Mani

ದಿನಾಂಕ:– 05/06/2025 ಸಹಿ

I/c

**ಪ್ರತಿಯನ್ನು:–**

1. ದೇವಾಲಯದ ನೋಟೀಸ್ ಬೋರ್ಡಿಗೆ.
2. ಜಿಲ್ಲಾ ನ್ಯಾಯಾಲಯದ ಕಾರವಾರದ ನೋಟೀಸ್ ಬೋರ್ಡಿಗೆ.
3. ತಹಶೀಲ್ದಾರ ಕಛೇರಿ, ಹೊನ್ನಾವರ ನೋಟೀಸ್ ಬೋರ್ಡಿಗೆ.
4. ತಾಲೂಕಾ ಆಡಳಿತ ಹೊನ್ನಾವರ ನೋಟೀಸ್ ಬೋರ್ಡಿಗೆ.
5. ಪಟ್ಟಣ ಪಂಚಾಯತ ಹೊನ್ನಾವರ ನೋಟೀಸ್ ಬೋರ್ಡಿಗೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹೊನ್ನಾವರ ನೋಟೀಸ್ ಬೋರ್ಡಿಗೆ.
7. ಗ್ರಾಮ ಪಂಚಾಯತ ಇಡಗುಂಜಿ ನೋಟೀಸ್ ಬೋರ್ಡಿಗೆ.
8. ಗ್ರಾಮ ಲೆಕ್ಕಾಧಿಕಾರಿಗಳು ಇಡಗುಂಜಿ ನೋಟೀಸ್ ಬೋರ್ಡಿಗೆ.

## ಶ್ರೀ ವಿನಾಯಕ ದೇವಾಲಯ ಇಡಗುಂಜಿ.

(ಸುಪ್ರೀಂ ಕೋರ್ಟ್ ರಿಸೀವರ್ ಜಿಲ್ಲಾ ನ್ಯಾಯಾಧೀಶರ ಆಡಳಿತದಲ್ಲಿದೆ)

ದಿನಾಂಕ :-12/06/2025

ಶ್ರೀ ವಿನಾಯಕ ದೇವಾಲಯ ಇಡಗುಂಜಿ

# ಅಂಗಡಿ ಮಳಿಗೆಗಳ ಬಹಿರಂಗ ಹರಾಜಿನ ಪ್ರಕಟಣೆ ತಿದ್ದುಪಡಿ

ಗೌರವಾನ್ವಿತ ರಿಸೀವರ್, ಶ್ರೀ ವಿನಾಯಕ ದೇವಾಲಯ ಇಡಗುಂಜಿ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಕಾರವಾರ ಇವರ ಆದೇಶದ ಮೇರೆಗೆ ಶ್ರೀ ವಿನಾಯಕ ದೇವಾಲಯ ಇಡಗುಂಜಿಗೆ ಸಂಬಂಧಿಸಿದ 8 ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜು ಪ್ರಕ್ರಿಯೆಯ ಮೂಲಕ ಬಾಡಿಗೆಗೆ ನೀಡಲು ತೀರ್ಮಾನಿಸಿ, ಬಹಿರಂಗ ಪ್ರಕಟಣೆಯನ್ನು ದಿನಾಂಕ:-05/06/2025ರಂದು ಹೊರಡಿಸಲಾಗಿತ್ತು. ಸದ್ರಿ ಬಹಿರಂಗ ಪ್ರಕಟಣೆಯ ಸೂಚನೆ ನಂಬರ 7 ರಲ್ಲಿ ಗೌರವಾನ್ವಿತ ರಿಸೀವರ್, ಶ್ರೀ ವಿನಾಯಕ ದೇವಾಲಯ ಇಡಗುಂಜಿ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಕಾರವಾರ ಇವರ ಆದೇಶದ ಮೇರೆಗೆ **"ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜಿನಲ್ಲಿ ಪಡೆದವರು ಭದ್ರತಾ ಠೇವಣಿಯಾಗಿ ಬಹಿರಂಗ ಹರಾಜಿನಲ್ಲಿ ತಾವು ಕೂಗಿದ ತಿಂಗಳ ಬಾಡಿಗೆಯ ಹತ್ತು ಪಟ್ಟು/ ಹತ್ತು ತಿಂಗಳ ಬಾಡಿಗೆಯಷ್ಟು ಮೊತ್ತದಲ್ಲಿ 25% ರಷ್ಟು ಮೊತ್ತವನ್ನು ಬಹಿರಂಗ ಹರಾಜು ಪ್ರಕ್ರಿಯೆ ನಡೆಯುವ ದಿನ ಕಡ್ಡಾಯವಾಗಿ ಪಾವತಿಸುವುದು ಹಾಗೂ ಉಳಿದ 75% ರಷ್ಟು ಮೊತ್ತವನ್ನು ಕರಾರು ಪತ್ರ ಮಾಡುವ ಪೂರ್ವದಲ್ಲಿ ದೇವಾಲಯದ ಕಾರ್ಯಾಲಯದಲ್ಲಿ ಪಾವತಿಸಿ ರಶೀದಿ ಪಡೆಯತಕ್ಕದ್ದು"** ಎಂದು ತಿದ್ದುಪಡಿ ಮಾಡಲಾಗಿದೆ.

Mah.

Ic ತಮ್ಮ ವಿಶ್ವಾಸಿ

(ದೇವಸ್ಥಾನ)

ಶ್ರೀ ವಿನಾಯಕ ದೇವರು ಇಡಗುಂಜಿ

AnyScanner